ಓ ಎಸ್ಃ 577/2014

ಡಿ ಡಬ್ಲ್ಯೂ ಃ 1

ದಿನಾಂಕಃ 21.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 7 ರವರ ಪರ ಶ್ರೀ ಎಸ್ ಎ ಹೆಚ್ ವಕೀಲರಿಂದಃ**

ನನ್ನ ತಾತ ರೇವಯ್ಯ ನವರ ಹೆಸರಿನಲ್ಲಿ ಇದ್ದಂತಹ ಸ್ವತ್ತುಗಳ ವಿವರಗಳನ್ನು ನನಗೆ ಹೇಳಲಾಗುತ್ತದೆ , ಅವುಗಳ ವಿವರಗಳು ಯಾವುದು ಎಂದರೆ ಸ.ನಂ. 110/12 , ಸ.ನಂ. 126/4 , ಸ.ನಂ. 126/16 , ಸ.ನಂ. 69/1 , ಮತ್ತು ಸ.ನಂ. 4/8 ಆಗಿರುತ್ತವೆ ಮತ್ತು ನನ್ನ ತಾತನಿಗೆ ಪಿತ್ರಾರ್ಜಿತವಾಗಿ ಮನೆಯೊಂದು ಬಂದಿರುತ್ತದೆ. ಸದರಿ ಮನೆ ಮತ್ತು ಸ್ವತ್ತುಗಳು ದೊಡ್ಡೇರಿ ಗ್ರಾಮದಲ್ಲಿರುತ್ತವೆ. ಸ.ನಂ. 101/4 ನಮ್ಮ ತಾತ ರೇವಯ್ಯ ನವರಿಗೆ ಸೇರಿದ ಸ್ವತ್ತಾಗಿರುತ್ತದೆ ಎಂದರೆ ನನಗೆ ಮಾಹಿತಿ **ಇರುವುದಿಲ್ಲ.** ಎಲ್ಲ ಸ್ವತ್ತುಗಳು ನನ್ನ ತಾತನ ಹೆಸರಿನಿಂದ ಜುಂಜಯ್ಯ ನವರ ಹೆಸರಿಗೆ ಮತ್ತು ನನ್ನ ತಾತ ರಾಮಲಿಂಗಯ್ಯ ನ ಹೆಸರಿಗೆ ವರ್ಗಾವಣೆ ಆಗಿರುವುದಿಲ್ಲ ಎಂದರೆ ಜಂಟಿಯಾಗಿರುತ್ತದೆ. ಜಂಟಿಯಾಗಿ ಖಾತೆ ಹಸ್ತಾಂತರ ಆಗಿರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಪಹಣಿಯನ್ನು ನೀಡಿರುತ್ತೇನೆ. ನಾನು ಆ ರೀತಿಯಾದಂತಹ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸಾಕ್ಷಿ ಸದರಿ ದಾಖಲಾತಿಗಳನ್ನು ನಾನು ಹಾಜರು ಮಾಡಿಲ್ಲ ಎಂದು ನುಡಿಯುತ್ತಾರೆ. ಆ ರೀತಿಯಾದ ಯಾವುದೇ ದಾಖಲಾತಿ ಅಸ್ತಿತ್ವದಲ್ಲಿರುವುದಿಲ್ಲ, ಆದ್ದರಿಂದ ನಾನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. **ಸಾಕ್ಷಿಗೆ ಒಂದು ಪಹಣಿಯನ್ನು ತೋರಿಸಲಾಗಿ ಸದರಿ ಪಹಣಿಯಲ್ಲಿ ನನ್ನ ತಾತ ರೇವಯ್ಯ ನವರ ಹೆಸರಿಗೆ 2000 ದ ಇಸವಿಯವರೆಗೂ ಖಾತೆ ಇರುತ್ತದೆ ಎಂದು ತೋರಿಸಿದರೆ ಸಾಕ್ಷಿ ಸರಿ ಎಂದು ಹೇಳಿದ್ದು, ಸದರಿ 3 ಕೈ ಬರಹದ ಪಹಣಿಗಳನ್ನು ನಿ ಡಿ 12 ರಿಂದ ನಿ ಡಿ 14 ಎಂದು ಗುರುತಿಸಲಾಯಿತು.**

ನನ್ನ ತಂದೆ ಮತ್ತು ಜುಂಜಯ್ಯ ನವರ ಹೆಸರು ನಮ್ಮ ತಾತನ ಹೆಸರಿನ ನಂತರ ಜಂಟಿಯಾಗಿ ಪಹಣಿಗಳಲ್ಲಿ ಬರುತ್ತಿಲ್ಲ ಎಂದು ಸಾಕ್ಷಿಗೆ ಇನ್ನು ಕೆಲವು ದಾಖಲಾತಿಗಳನ್ನು ತೋರಿಸಲಾಗಿ ಸದರಿ ಕೆಲವು ದಾಖಲಾತಿಗಳನ್ನು ನೋಡಿ ಇಲ್ಲ ಪ್ರತ್ಯೇಕವಾಗಿ ಪಹಣಿಗಳು ಬರುತ್ತಿವೆ ಎಂದು ನುಡಿದಿರುತ್ತಾರೆ. **ಸಾಕ್ಷಿಗೆ ಈಗ ಮತ್ತೆ 7 ಕೈ ಬರಹದ ಪಹಣಿಗಳನ್ನು ತೋರಿಸಲಾಗಿ ಸದರಿ ಪಹಣಿಗಳಲ್ಲಿ ನನ್ನ ತಾತನ ಹೆಸರು ರೇವಯ್ಯನವರ ಹೆಸರು ಮಾತ್ರ ಬಂದಿರುತ್ತದೆ ಎಂದು ಸಾಕ್ಷಿ ನೋಡಿ ಹೇಳಿದ್ದು, ಸದರಿ 7 ಪಹಣಿಗಳನ್ನು ನಿ ಡಿ 15 ರಿಂದ ನಿ ಡಿ 21 ಎಂದು ಗುರುತಿಸಲಾಯಿತು.**

ರೇವಯ್ಯ ನವರ ಕಾಲಕ್ಕೆ ಎಲ್ಲ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿತ್ತು ಎಂದರೆ ಸರಿ. ಐಟಂ ನಂಬರ್ 1 , 3 ಮತ್ತು 4 ರ ದಾವಾ ಸ್ವತ್ತುಗಳು ರೇವಣ್ಣ ನವರ ಹೆಸರಿನಲ್ಲಿ ಇದ್ದಂತಹ ಆಸ್ತಿಗಳಾಗಿರುತ್ತದೆ ಎಂದರೆ ಸಾಕ್ಷಿ ಐಟಂ ನಂಬರ್ 1 ರಲ್ಲಿ ಸ.ನಂ.110 ರ ಶೆಡ್ಯೂಲ್ ಸರಿಯಾಗಿದ್ದು, ಆದರೆ ಸ.ನಂ.110/12 ರೇವಯ್ಯ ನವರ ಹೆಸರಿನಲ್ಲಿರುತ್ತದೆ, ಆದರೆ ಸದರಿ ಶೆಡ್ಯೂಲ್ ಐಟಂ ನಂಬರ್ 1 ರಲ್ಲಿ ಸ.ನಂ.110 ರೇವಯ್ಯ ನವರ ಹೆಸರಿನಲ್ಲಿ ಇರುವುದಿಲ್ಲ. ಸ.ನಂ. 110 ರೇವಯ್ಯ ನವರ ಜಮೀನಾಗಿತ್ತು ಎಂದರೆ ಸಾಕ್ಷಿ ಸ.ನಂ. 110/12 ರೇವಯ್ಯ ನವರ ಜಮೀನಾಗಿತ್ತು ಎಂದು ನುಡಿಯುತ್ತಾರೆ. ಅದೇ ರೀತಿ ಸ.ನಂ. 69 ಮತ್ತು ಸ.ನಂ. 126 ರೇವಯ್ಯ ನವರ ಸ್ವತ್ತಾಗಿತ್ತು ಎಂದರೆ ಸರಿಯಲ್ಲ. ಒಂದು ಮನೆ ಐಟಂ ನಂಬರ್ 4 ರಲ್ಲಿ ತೋರಿಸಿರುವಂತೆ ರೇವಣ್ಣನವರ ಮನೆಯಾಗಿತ್ತು ಎಂದರೆ ಸರಿ. ಸ.ನಂ. 126 ರಲ್ಲಿ ರೇವಯ್ಯ ನವರ ಹೆಸರಿನಲ್ಲಿರುವುದಿಲ್ಲ.

ದಾವಾ ಸ್ವತ್ತುಗಳು ಜುಂಜಯ್ಯ ಮತ್ತು ರಾಮಲಿಂಗಯ್ಯ ಮತ್ತು ಅವರ ಮೊಮ್ಮಕ್ಕಳಿಗೆ ಖಾತೆ ಬದಲಾವಣೆ ಆಗಿರುತ್ತವೆ. ಖಾತೆ ಬದಲಾವಣೆ ಜುಂಜಯ್ಯ ಮತ್ತು ರಾಮಲಿಂಗಯ್ಯ ನವರ ಹೆಸರಿಗೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಚಿಕ್ಕಪ್ಪ ಖರೀದಿ ಮಾಡಿರುವುದರಿಂದ ಎಲ್ಲ ಸ್ವತ್ತುಗಳು ನಮ್ಮ ತಂದೆಯ ಭಾಗಕ್ಕೆ ಬಂದಿರುತ್ತದೆ. ಯಾವುದೇ ಮಾರಾಟ ಆಗಿರುವುದಿಲ್ಲ, ಯಾವುದೇ ಮಾರಾಟದ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನೋಂದಣಿಯಾಗದೇ ಇರುವ ಕ್ರಯಪತ್ರಕ್ಕೆ stamp duty ನ್ನು ಕಟ್ಟಿರುತ್ತೇನೆ.

ರಾಮಲಿಂಗಯ್ಯ , ಜುಂಜಯ್ಯ ಮತ್ತು ಶಿವಮ್ಮ ನವರು ವಿಭಾಗ ಆಗಿರುವುದಕ್ಕೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ವಿಭಾಗ ಆಗಿರುತ್ತದೋ ಇಲ್ಲವೋ ಎಂದು ವಿಭಾಗ ಆದ ದಿನ ನಾನು ಹುಟ್ಟಿಲ್ಲದೆ ಇರುವ ಕಾರಣ ನನಗೆ ಅದರ ಬಗ್ಗೆ ಪ್ರತ್ಯಕ್ಷ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿ ನಾನು ಅದರ ಬಗ್ಗೆ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಇದರ ಬಗ್ಗೆ ನನ್ನ ತಂದೆಯವರ ಕಡೆಯಿಂದ ತಿಳಿದುಕೊಂಡಿರುತ್ತೇನೆ . ನಮ್ಮ ಕುಟುಂಬದ ಎಲ್ಲ ಆಸ್ತಿಗಳು ಭಾಗ ಆಗಿರುತ್ತದೋ ಎಂದರೆ ಸಾಕ್ಷಿ ನಾವು ಯಾವ ಯಾವ ಸ್ವತ್ತಿನಲ್ಲಿ ಅನುಭವ ಇರುತ್ತೇವೋ ಅವುಗಳನ್ನು ಮಾತ್ರ ಭಾಗ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸ.ನಂ. 101/4 ಮತ್ತು ಸ.ನಂ. 4/8 ಭಾಗ ಆಗಿರುವ ಹಾಗೆ ನಮ್ಮ ವಿಭಾಗಪತ್ರದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿ ಸದರಿ ಸ್ವತ್ತುಗಳು ಯಾವ ಕಾರಣಕ್ಕೆ ಬಿಟ್ಟಿರುತ್ತಾರೋ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ವಿಭಾಗಪತ್ರದಲ್ಲಿ ಇರುವಂತೆ ಯಾವುದೇ ಸಂಗತಿಗಳು ನಮ್ಮ ಕುಟುಂಬದಲ್ಲಿ ನಡೆದಿರುವುದಿಲ್ಲ ಮತ್ತು ಸದರಿ ವಿಭಾಗ ಪತ್ರ ಕೇವಲ ಪತ್ರವಾಗಿ ಉಳಿದಿರುತ್ತದೆ ಎಂದರೆ ನನಗೆ ಯಾವ ಕಾರಣಕ್ಕೆ ಅದರಲ್ಲಿ ಇರುವ ಅಂಶಗಳ ಪ್ರಕಾರ ಕುಟುಂಬದ ಸ್ವತ್ತುಗಳು ಮತ್ತು ಕೆಲವು ವಿಚಾರಗಳು ವಿಭಾಗ ಆಗಿರುವುದಿಲ್ಲವೋ ಎಂದು ಗೊತ್ತಿಲ್ಲ ಎಂದು ಹೇಳಿ, ನಂತರ ಅವರು ಯಾವ ಕಾರಣಕ್ಕೆ ಸ.ನಂ. 104 /4 ಮತ್ತು 4/8 ಸ್ವತ್ತುಗಳನ್ನು ಯಾವ ಕಾರಣಕ್ಕೆ ವಿಭಾಗದಲ್ಲಿ ಸೇರಿಸಿಲ್ಲವೋ ನನಗೆ ಗೊತ್ತಿಲ್ಲ. ಯಾವ ಕಾರಣಕ್ಕೆ ಸದರಿ ಪತ್ರವನ್ನು ಕಾರ್ಯರೂಪಕ್ಕೆ ತಂದಿರುವುದಿಲ್ಲ ಎಂದರೆ ಸಾಕ್ಷಿ ಸರ್ಕಾರಕ್ಕೆ ಕಟ್ಟಬೇಕಾದ ಹಣವನ್ನು ಕಟ್ಟದೇ ಯಾವ ಕಾರಣಕ್ಕೆ ಆ ಪತ್ರವನ್ನು ನೋಂದಣಿ ಮಾಡಿಸಿಲ್ಲವೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮೇಲೆ ಹೇಳಿರುವ ಕೆಲವು ಸ್ವತ್ತುಗಳನ್ನು ಬಿಟ್ಟಿರುವುದು ಮತ್ತು ವಿಭಾಗ ಪತ್ರವನ್ನು ಕಾರ್ಯ ರೂಪಕ್ಕೆ ತರದೇ ಇರುವುದರಿಂದ ದಾವಾ ಸ್ವತ್ತುಗಳ ವಿಭಾಗ ಆಗಿರುವುದಿಲ್ಲ ಎಂದರೆ ಸುಳ್ಳು.

ನೇತ್ರಾವತಿ ರವರಿಗೂ ಕೂಡ ದಾವಾ ಸ್ವತ್ತುಗಳು ವಿಭಾಗ ಆಗಿರುವ ಬಗ್ಗೆ ನನ್ನ ತರಹ ವಿಭಾಗ ಆಗುವ ಸಮಯದಲ್ಲಿ ಅವರು ಹುಟ್ಟದೇ ಇರುವುದರಿಂದ ಅವರಿಗೂ ಕೂಡ ವಿಭಾಗದ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ . ವಿಭಾಗ ಆಗಿರುತ್ತದೆ ಎನ್ನುವ ಮಾಹಿತಿ ನನಗೆ ಹೇಗೆ ಸಿಕ್ಕಿತು ಎಂದರೆ ಸಾಕ್ಷಿ ನನ್ನ ತಂದೆ , ತಾಯಿ , ಊರಿನವರು ಮತ್ತು ದಾಖಲಾತಿಗಳನ್ನು ನೋಡಿ ನನಗೆ ಗೊತ್ತಾಗಿರುತ್ತದೆ. ನನಗೆ ಮಾಹಿತಿಗಳು ಮನೆಯಲ್ಲಿ ಸಿಕ್ಕಿರುತ್ತದೆ. ವಿಭಾಗಪತ್ರ ನಮ್ಮ ಮನೆಯಲ್ಲೇ ಇತ್ತು. ನನ್ನ ತಂದೆಯವರು ವಿಭಾಗ ಆಗಿರುತ್ತದೆ ಎಂದು ನನಗೆ ಸುಳ್ಳು ಮಾಹಿತಿ ನೀಡಿರುತ್ತಾರೆ ಎಂದರೆ ಸುಳ್ಳು. ನನ್ನ ತಂದೆಯವರಿಗೆ ವಿಭಾಗದ ಬಗ್ಗೆ ಗೊತ್ತಿದ್ದರೆ ಅವರು ಸಾಕ್ಷಿ ಹೇಳಲು ನ್ಯಾಯಾಲಯದ ಮುಂದೆ ಬರಬಹುದಿತ್ತು ಎಂದರೆ ಸಾಕ್ಷಿ ಅವರಿಗೆ ಕಣ್ಣು ಕಾಣಿಸುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆ ಅವರ ತಮ್ಮನಿಗೆ ಆಸ್ತಿ ನೀಡದೇ ನನ್ನನ್ನು ಈ ದಾವೆಯಲ್ಲಿ ಸಾಕ್ಷಿ ನುಡಿಯಲು ಕಳುಹಿಸಿರುತ್ತಾರೆ ಎಂದರೆ ಸುಳ್ಳು. ನನ್ನ ತಂದೆಗೆ ಕಣ್ಣು ಸರಿಯಾಗಿ ಕಾಣಿಸುತ್ತಿದ್ದು, ಅವರಿಗೆ ಸಾಕ್ಷಿ ಹೇಳುವ ಧೈರ್ಯ ಇಲ್ಲದೇ ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಎಂದರೆ ಸುಳ್ಳು. ನನ್ನ ತಂದೆ ನ್ಯಾಯಾಲಯಕ್ಕೆ ಬರದೇ ex parte ಆಗಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆ ಎಲ್ಲ ನನಗೆ ವಹಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ನನಗೆ ಹೇಳಿದ ಹಾಗೇ ಅವರ ಮಾರ್ಗದರ್ಶನದಲ್ಲಿ ನಾನು ಸಾಕ್ಷಿ ನುಡಿಯುತ್ತಿದ್ದೇನೆ. ನಾನು ಮತ್ತು ಪ್ರತಿವಾದಿ 6 ರವರು ಸೇರಿ ಒಂದೇ ನಿಲುವನ್ನು ಮಾತನಾಡಿಕೊಂಡು ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ನ್ಯಾಯಯುತವಾಗಿ

ಭಾಗವನ್ನು ಕೊಡದೇ ನಮ್ಮ ತಂದೆ ಮತ್ತು ತಂಗಿಯೊಂದಿಗೆ ಶಾಮೀಲಾಗಿ ಅವರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸುಳ್ಳು. ಪ್ರತಿವಾದಿ 7 ರವರಿಗೂ ಸಹ ಭಾಗ ಕೊಡುವ ಉದ್ದೇಶ ನಮಗೆ ಇರುವುದಿಲ್ಲ ಎಂದರೆ ಭಾಗ ಕೊಡುವ ಉದ್ದೇಶ ಇರುತ್ತದೆ. ನಾನು ಯಾವ ಉದ್ದೇಶಕ್ಕೆ ಪ್ರತಿವಾದಿಯಾಗಿ ಈ ದಾವೆಯಲ್ಲಿ ಸೇರ್ಪಡೆಯಾಗಿದ್ದೇನೆ ಎಂದರೆ ನನ್ನನ್ನು ಪ್ರತಿವಾದಿಗಳು ಈ ದಾವೆಯಲ್ಲಿ ಸೇರಿಸಿರುತ್ತಾರೆ ಎಂದು ನುಡಿಯುತ್ತಾರೆ.

ಪ್ರತಿವಾದಿ 6 ರವರಿಗೆ 2004 ರಲ್ಲಿ ಮದುವೆಯಾಗಿರುತ್ತದೆ. ಪ್ರತಿವಾದಿಗೆ ಒಟ್ಟು ಕುಟುಂಬದ ಸೇರಿ ಮದುವೆ ಮಾಡಿರುತ್ತಾರೆ. ಪ್ರತಿವಾದಿ 7 ರವರಿಗೆ ಭಾಗ ಕೊಡದೇ ಇರುವುದಕ್ಕೆ ನಾವು ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಶಿವಮ್ಮ ನವರಿಗೆ ಮತ್ತು ವಾದಿ, ಪ್ರತಿವಾದಿ 1 ರವರಿಗೆ ಭಾಗ ಇರುತ್ತದೆ ಮತ್ತು ನನಗೆ ನಮ್ಮ ತಂದೆಯ ಭಾಗದಲ್ಲಿ ಮಾತ್ರ ಹಕ್ಕು ಇರುತ್ತದೆ ಎಂದರೆ ಸುಳ್ಳು. ನಾನು ಈ ದಾವೆಯಲ್ಲಿ ಸುಳ್ಳು ನಿಲುವು ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**